

# ಆಟ ಹುಡುಗಾಟವೋ..

■ ಡಿ.ಎನ್. ಗೀತಾ

ನನಗೆ ಎಚ್ಚರವಾಗುವ ವೇಳೆಗೆ ಸಾಕಷ್ಟು ತಡವಾಗಿತ್ತು. ರವಿಯ ಬೆಳ್ಳಿಯ ಕಿರಣಗಳು ಭೂಮಿಯಲ್ಲಿ ಚಿತ್ತಾರ ಬರೆದಿದ್ದರೆ ನನ್ನ ಮನದ ಆಕಾಶದಲ್ಲಿ ಆತಂಕ ಮೋಡಗಟ್ಟಿತ್ತು. ಆ ಮೋಡ ಗುಡುಗು ಸಿಡಿಲಾಗಿ ಆರ್ಭಟಿಸಿ ಯಾವ ಕ್ಷಣದಲ್ಲಾದರೂ ಭೋರ್ಗರೆಯುವ ಮಳೆಯಾಗಬಹುದೆನ್ನಿಸಿ ಕಷ್ಟಪಟ್ಟು ಕಣ್ಣೀರನ್ನು ತಡೆಹಿಡಿದೆ. ನನ್ನ ದೃಷ್ಟಿ ಮಗನಿಗಾಗಿ ಅತ್ತಿತ್ತ ಹುಡುಕಾಡಿತು. ಒಂದು ಕ್ಷಣ ಬೆಚ್ಚಿದೆ. ವಾಸ್ತವಿಕ ಪ್ರಜ್ಞೆಯೇ ಇಲ್ಲದೆ ರಾತ್ರಿ ಮೈ ಮರೆತು ನಿದ್ರಿಸಿದ್ದವನು ಈಗ ಪತ್ತೆಯಿರಲಿಲ್ಲ...! ಏನಾಯಿತು ಮುದ್ದಿನ ಮಗನಿಗೆ?

'ನೇತ್ರ, ನಾನು ಒಂದು ತಿಂಗ್ಳಿಂದ ಹೇಳ್ತಾನೇ ಇದ್ದೆ; ನಿನಾದನ ನಡವಳಿಕೆ ಸರಿ ಇಲ್ಲ ಅಂತ. ರಾತ್ರಿ ಎಷ್ಟು ಹೊತ್ತಿಗೋ ಮಲಗ್ತಾನೆ, ಯಾವಾಗ್ಲೋ ಏಳ್ತಾನೆ. ಹಿಂದಿನ ವಾರ ಅವನ ಸ್ಕೂಲಿನ ಹೆಡ್‌ಮೇಡಂ ಫೋನ್ ಮಾಡಿದ್ರು. ಅವ್ನು ಕ್ಲಾಸ್ ತಪ್ಸಿ ಸ್ಕೂಲಿನ ಪಕ್ಕದಲ್ಲಿರೋ ಸ್ಮಶಾನದಲ್ಲಿ ಗಂಟೆಗಟ್ಟಲೆ ಕೂತುಬಿಡ್ತಾನಂತೆ, 'ಹುಡುಗ ಸರಿಯಿಲ್ಲ, ಕೇರ್ ಮಾಡಿ' ಅಂದ್ರು. ನಿಂಗೆ ಈ ವಿಷಯ ಹೇಳೋಣ ಅಂದ್ರೆ ನೀನೋ ಯಾವಾಗ್ಲೂ ಬಿಜಿ. ನಿಜವಾಗ್ಲೂ ಹೇಳ್ತಿದೀನಿ ಕೇಳು, ನಿನ್ನ ಮಗನನ್ನು ಯಾವ್ದೋ ದೆವ್ವ ಹಿಡ್ಕೊಂಡಿದೆ. ಈ ಡಾಕ್ಟ್ರಲ್ಲ ಇನ್ನು ಹತ್ತು ಡಾಕ್ಟ್ರು ಬಂದ್ರೂ ಅವ್ನು ಸರಿಯಾಗಲ್ಲ..'

ಅಮ್ಮ ಅಸಹನೆಯಿಂದ ಮಾತನಾಡಿದಾಗ ಅವಳನ್ನೇ ಆತಂಕದಿಂದ ನೋಡಿದೆ. ಇದು ನನಗೆ ಹೊಸ ವಿಷಯ. ಚೂಟಿಯಾಗಿ ಓಡಾಡಿಕೊಂಡು